# 2016-17ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ

1.1.ಶೈಕ್ಷಣಿಕವರ್ಷದ ಪ್ರಾರಂಭ: ದಿನಾಂಕ: 01-06-2016

ಮಧ್ಯಂತರ ರಜೆ(ಎರಡೂ ದಿನಗಳು ಸೇರಿ): ದಿನಾಂಕ: 07-10-2016ರಿಂದ27-10-2016ರವರೆಗೆ

| ದ್ವಿತೀಯ ಪಿಯುಸಿ ದಾಖಲಾತಿ ವೇಳಾಪಟ್ಟಿ | |
|---|---|
| ಪ್ರಾರಂಭದ ದಿನಾಂಕ: | 23-05-2016 |
| ದಂಡ ಶುಲ್ಕವಿಲ್ಲದೆ ದಾಖಲಾತಿಗೆ ಕೊನೆಯ ದಿನಾಂಕ: | 15-06-2016 |
| ವಿಳಂಬ ದಾಖಲಾತಿ ರೂ 504/- ದಂಡಶುಲ್ಕದೊಂದಿಗೆ (ಎರಡೂ ದಿನಗಳು ಸೇರಿ) | ದಿನಾಂಕ:16-06-2016 ರಿಂದ 21-06-2016 ರವರೆಗೆ |
| ವಿಶೇಷ ವಿಳಂಬ ದಾಖಲಾತಿ ರೂ 504 +1680ದಂಡ ಶುಲ್ಕದೊಂದಿಗೆ (ಎರಡೂ ದಿನಗಳು ಸೇರಿ) | ದಿನಾಂಕ: 22-06-2016 ರಿಂದ 28-06-2016 ರವರೆಗೆ |
| ದ್ವಿತೀಯ ಪಿಯುಸಿ ತರಗತಿಗಳ ಪ್ರಾರಂಭ | ದಿನಾಂಕ: 01-06-2016. |

## 1.2 ದ್ವಿತೀಯ ಪಿಯುಸಿ ತರಗತಿಗೆ ದಾಖಲಾತಿ ಅರ್ಹತೆಗಳು

ದ್ವಿತೀಯ ಪದವಿ ಪೂರ್ವ ತರಗತಿಗಳಿಗೆ ಈ ಕೆಳಕಂಡ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಳ್ಳುವುದು.

1. ಅದೇ ಕಾಲೇಜಿನಲ್ಲಿ ಪ್ರಥಮ ಪಿಯುಸಿ ವ್ಯಾಸಂಗ ಮಾಡಿ, ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ದ್ವಿತೀಯ ಪಿಯುಸಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು.
2. ಪ್ರಥಮ ಪಿಯುಸಿಯನ್ನು ಅದೇ ಕಾಲೇಜಿನಲ್ಲಿ ಹಿಂದಿನ ವರ್ಷಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿ ದ್ವಿತೀಯ ಪಿಯುಸಿ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು.
3. ಹಿಂದಿನ ವರ್ಷಗಳಲ್ಲಿ ದ್ವಿತೀಯ ಪದವಿ ಪೂರ್ವ ತರಗತಿಗೆ ದಾಖಲಾಗಿ ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗಲು ಅನುಮತಿ ನಿರಾಕರಿಸಲ್ಪಟ್ಟ ವಿದ್ಯಾರ್ಥಿಗಳು.
4. ಪ್ರಥಮ ಪಿಯುಸಿಯನ್ನು ರಾಜ್ಯದಲ್ಲಿರುವ ಬೇರೆ ಪದವಿ ಪೂರ್ವ ಕಾಲೇಜುಗಳಲ್ಲಿ ಹಿಂದಿನ ಅಥವಾ ಅದಕ್ಕೂ ಹಿಂದಿನ ವರ್ಷಗಳಲ್ಲಿ ಅಭ್ಯಾಸ ಮಾಡಿ ಉತ್ತೀರ್ಣರಾಗಿ, ದ್ವಿತೀಯ ಪಿಯುಸಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳು.
5. 10ನೇ ತರಗತಿ/ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪ್ರಥಮ ಪಿಯುಸಿಗೆ ದಾಖಲಾಗಿ ಅನಿವಾರ್ಯ ಕಾರಣದಿಂದ ವ್ಯಾಸಂಗವನ್ನು ಮುಂದುವರೆಸಲು ಸಾಧ್ಯವಾಗದ ರಾಜ್ಯದ/ ಹೊರರಾಜ್ಯದ ವಿದ್ಯಾರ್ಥಿಗಳು.
6. **ಹೊರರಾಜ್ಯಗಳಲ್ಲಿ / ಹೊರದೇಶಗಳಲ್ಲಿ ಪ್ರಥಮ ಪಿಯುಸಿಗೆ ತತ್ಸಮಾನವಾದ (COBSE ರವರಿಂದ ಮಾನ್ಯತೆ ಪಡೆದ) ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿಗೆ ದಾಖಲಾತಿ ಬಯಸುವ ವಿದ್ಯಾರ್ಥಿಗಳು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದಿಂದ ತಾತ್ಕಾಲಿಕ ಅರ್ಹತಾ ಪತ್ರವನ್ನು ದಾಖಲಾತಿಗೆ ಮೊದಲು ಕಡ್ಡಾಯವಾಗಿ ಪಡೆದು ಕಾಲೇಜಿನಲ್ಲಿ ದಾಖಲಾತಿ ಪಡೆಯಬೇಕು.**
7. **CBSE/ICSE/STATE/OTHER STATE/ಬೋರ್ಡ್‌ಗಳ 11ನೇ ತರಗತಿ ಪಠ್ಯಕ್ರಮದಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 12ನೇ ತರಗತಿಗೆ (ದ್ವಿತೀಯ ಪಿಯುಸಿಗೆ) ದಾಖಲಾಗಲು ಅರ್ಹರಾಗಿರುತ್ತಾರೆ.**

## *1.3 ಕಾಲೇಜು ಬದಲಾವಣೆ ವಿಷಯ ಬದಲಾವಣೆ ಹಾಗೂ ಸಂಯೋಜನೆ ಬದಲಾವಣೆ ಕುರಿತ ಮಾರ್ಗಸೂಚಿ.*

ರಾಜ್ಯದಲ್ಲಿ ಪ್ರಥಮ ಪಿಯುಸಿಯಲ್ಲಿ ಉತ್ತೀರ್ಣರಾಗಿ ಬೇರೆ ಕಾಲೇಜಿನಲ್ಲಿ ದ್ವಿತೀಯ ಪಿಯುಸಿಗೆ ಕಾಲೇಜು ಬದಲಾವಣೆ ಕೋರಿ(CBSE/ICSE/STATE/OTHER STATE/ಬೋರ್ಡ್‌ಗಳ) ಹಲವಾರು

ವಿದ್ಯಾರ್ಥಿಗಳು/ ಪೋಷಕರು ತಮ್ಮ ಮಕ್ಕಳ ದ್ವಿತೀಯ ಪಿಯುಸಿ ವ್ಯಾಸಂಗವನ್ನು ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಮುಂದುವರೆಸಲು/ಸೇರಲು ಬಯಸಿ ವಿದ್ಯಾರ್ಥಿಗಳೊಂದಿಗೆ ಹೊರ ರಾಜ್ಯ/ಜಿಲ್ಲೆಯಿಂದ ನಿರ್ದೇಶನಾಲಯಕ್ಕೆ ಅಗಮಿಸುತ್ತಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕಾಲೇಜು ದಾಖಲಾತಿ ಹಾಗೂ ಬದಲಾವಣೆ ಪಡೆಯಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ಸಿದ್ಧಪಡಿಸಿದೆ.

***ವಿಶೇಷ ಸೂಚನೆ:***

ಈ ಶೈಕ್ಷಣಿಕ ಸಾಲಿನಲ್ಲಿ ದ್ವಿತೀಯ ಪಿಯುಸಿ ತರಗತಿಗಳು ದಿನಾಂಕ **01-06-2016**ರಿಂದ ಪ್ರಾರಂಭಗೊಳ್ಳುತ್ತಿದ್ದು, ದ್ವಿತೀಯ ಪಿಯುಸಿ ತರಗತಿಗಳಿಗೆ ದಾಖಲಾತಿಯನ್ನು ದಿನಾಂಕ **23-05-2016**ರಿಂದ ಪ್ರಾರಂಭಿಸಲು ನಿರ್ದೇಶಿಸಲಾಗಿದೆ. ಯಾವುದೇ ಕಾರಣಕ್ಕೂ ತರಗತಿಗಳನ್ನು ವೇಳಾಪಟ್ಟಿಯಲ್ಲಿ ನಿಗದಿತ ದಿನಾಂಕಕ್ಕಿಂತ ಪೂರ್ವದಲ್ಲಿ ಪ್ರಾರಂಭಿಸಬಾರದು.

- ದ್ವಿತೀಯ ಪಿಯುಸಿ ತರಗತಿಗಳನ್ನು ಸರ್ಕಾರ/ನಿರ್ದೇಶನಾಲಯ ನಿಗಧಿ ಪಡಿಸಿರುವ ದಿನಾಂಕದಿಂದಲೇ ಪ್ರಾರಂಭಿಸಲು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರು/ಆಡಳಿತ ಮಂಡಳಿಗಳಿಗೆ ಈ ಮೂಲಕ ಸೂಚನೆಯನ್ನು ನೀಡಿದೆ.
- ದಿನಾಂಕ: **23-05-2016**ರಿಂದ ವಿದ್ಯಾರ್ಥಿಗಳ/ಪೋಷಕರ ಆತಂಕವನ್ನು ತಪ್ಪಿಸಲು ಕಾಲೇಜು ಬದಲಾವಣೆ ಮಾಡಿಕೊಳ್ಳಲು ಅನುಮತಿಯನ್ನು ನೀಡಲಾಗಿದೆ.
- ಕಾಲೇಜು ಬದಲಾವಣೆ ಬಯಸುವ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ**136** ಟಿಪಿಯು **1999**,ಬೆಂಗಳೂರು ದಿನಾಂಕ:**09-10-2006** ರಂತೆ ಕಾಲೇಜು ಬದಲಾವಣೆ /ಸಂಯೋಜನೆ ಬದಲಾವಣೆ/ ವಿಷಯ ಬದಲಾವಣೆಗೆ ಈ ಕೆಳಗಿನಂತೆ ಆದೇಶಿಸಿದೆ.

1. ನಿರ್ದೇಶನಾಲಯ ನೀಡಿರುವ ಸುತ್ತೋಲೆಗಳ ಚೌಕಟ್ಟಿನಂತೆ ದಾಖಲಾತಿಗೆ ಕೊನೆಯ ದಿನಾಂಕದವರೆಗೆ (ದಿನಾಂಕ: **28-06-2016**) ಕಾಲೇಜು ಬದಲಾವಣೆ ಬಯಸುವ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ನಿಗಧಿತ ಕಾಲೇಜು ಬದಲಾವಣೆ ಅರ್ಜಿ ನಮೂನೆಯಲ್ಲಿ ಹಿಂದೆ ವ್ಯಾಸಂಗ ಮಾಡಿದ ಕಾಲೇಜಿನ ಪ್ರಾಚಾರ್ಯರು ಅರ್ಜಿಗೆ ಸಹಿ ಹಾಗೂ ಮೊಹರು ಹಾಕಿ ಇತರೆ ಮಾಹಿತಿಗಳನ್ನು ಭರ್ತಿ ಮಾಡಿ ವಿದ್ಯಾರ್ಥಿಗೆ ನೀಡುವುದು.
2. ವಿದ್ಯಾರ್ಥಿಯು ಕಾಲೇಜು ಬದಲಾವಣೆ ಪಡೆಯಲು ತಾನು ವ್ಯಾಸಂಗ ಮಾಡಿದ ಕಾಲೇಜಿಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಂದ ಪ್ರಥಮ ಪಿಯುಸಿ ಅಂಕಪಟ್ಟಿಯನ್ನು ದೃಢೀಕರಣ ಪಡೆಯುವುದು ಕಡ್ಡಾಯವಾಗಿರುತ್ತದೆ.
3. ಮುಂದಿನ ವ್ಯಾಸಂಗಕ್ಕಾಗಿ ಕಾಲೇಜು ಬದಲಾವಣೆ ಕೋರಿ ಬಂದ ವಿದ್ಯಾರ್ಥಿ ಸಲ್ಲಿಸುವ ಅರ್ಜಿ ಮತ್ತು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆರವರಿಂದ ದೃಢೀಕರಿಸಿದ ಅಂಕಪಟ್ಟಿಯನ್ನು ಪ್ರಾಚಾರ್ಯರು ಪರಿಶೀಲಿಸಿ, ವಿದ್ಯಾರ್ಥಿಯು ವ್ಯಾಸಂಗ ಮಾಡಿದ ಭಾಷಾ ಮತ್ತು ಸಂಯೋಜನೆ ತಮ್ಮಲ್ಲಿ ಲಭ್ಯವಿದ್ದಲ್ಲಿ ವಿದ್ಯಾರ್ಥಿಯನ್ನು ದಾಖಲಾತಿ ಮಾಡಿಕೊಳ್ಳಲು ಒಪ್ಪಿದಲ್ಲಿ ಕಾಲೇಜಿಗೆ ಪ್ರವೇಶ ನೀಡುವುದು.
4. ಕಾಲೇಜು ಬದಲಾವಣೆಯಾಗಿರುವ ಅರ್ಜಿಗಳನ್ನು ಜಿಲ್ಲೆ ಉಪ ನಿರ್ದೇಶಕರು ಮೂಲಕ ಕಾಲೇಜು ಬದಲಾವಣೆಗೆ ನೀಡಿರುವ ಕೊನೆಯ ದಿನಾಂಕದ ನಂತರ **10** ದಿನಗಳೊಳಗಾಗಿ ಕ್ರೋಢೀಕೃತ ಪಟ್ಟಿಯನ್ನು ಕಡ್ಡಾಯವಾಗಿ ಸಹಾಯಕ ನಿರ್ದೇಶಕರು, ಶೈಕ್ಷಣಿಕ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಕಳುಹಿಸತಕ್ಕದ್ದು. ತಪ್ಪಿದಲ್ಲಿ, ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರು ಹಾಗೂ ಉಪ ನಿರ್ದೇಶಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

5. ಕಾಲೇಜು ಬದಲಾವಣೆಗೆ ಅರ್ಜಿಯನ್ನು ಕೆಳಕಂಡ ಲಗತ್ತುಗಳೊಂದಿಗೆ ಸಲ್ಲಿಸತಕ್ಕದ್ದು.

- ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರಿಂದ ಸಹಿ ಪಡೆದ ಅರ್ಜಿ,
- ಜಿಲ್ಲಾ ಉಪನಿರ್ದೇಶಕರಿಂದ ದೃಢೀಕರಿಸಿದ ಪ್ರಥಮ ಪಿಯುಸಿ ಮೂಲ ಅಂಕಪಟ್ಟಿಯ ನಕಲು ಪ್ರತಿ.
- ಕಾಲೇಜು ಬದಲಾವಣೆಗಾಗಿ ಸರ್ಕಾರ ನಿಗಧಿಪಡಿಸಿರುವ ಶುಲ್ಕ ಪಾವತಿಸಿದ ಮೂಲ ಚಲನ್,
- ಪೋಷಕರ ಮನವಿ.

## ಆ. ಕಾಲೇಜು ಬದಲಾವಣೆಗೆ ಪ್ರಾಚಾರ್ಯರು ಪಾಲಿಸಬೇಕಾದ ಸೂಚನೆಗಳು:

1. **ಕಾಲೇಜು ಬದಲಾವಣೆ ಮಾಡಿ ದಾಖಲಾತಿ ಪಡೆಯುವ ವಿದ್ಯಾರ್ಥಿಗಳಿಂದ ಮೂಲ ದಾಖಲೆಗಳನ್ನು ಪಡೆದು ಪರಿಶೀಲಿಸಿ** ಪ್ರತಿ ವಿದ್ಯಾರ್ಥಿಯಿಂದ ಪ್ರಥಮ ಪಿಯುಸಿ ಅಥವಾ ತತ್ಸಮಾನ ಪರೀಕ್ಷೆಯ ನೋಂದಣಿ ಸಂಖ್ಯೆ, ವರ್ಷ, ಮತ್ತು ತಿಂಗಳ ಮಾಹಿತಿಯನ್ನು ಕರಾರುವಕ್ಕಾಗಿ ನಮೂದಿಸಿರುವುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು. ಮಾಹಿತಿಯ ಒಂದು ಪ್ರತಿಯನ್ನು ಪ್ರಾಚಾರ್ಯರು ದೃಢೀಕರಿಸಿ ತಮ್ಮ ಜಿಲ್ಲಾ ಉಪ ನಿರ್ದೇಶಕರ ಮೂಲಕ ಜಂಟಿ ನಿರ್ದೇಶಕರು(ಪರೀಕ್ಷೆ),ಪದವಿ ಪೂರ್ವ ಶಿಕ್ಷಣ ಇಲಾಖೆ, ರವರಿಗೆ ನಿಗಧಿತ ಸಮಯದಲ್ಲಿ ಸಲ್ಲಿಸುವುದು.
2. ಪ್ರಥಮ ಪಿಯುಸಿ/ ತತ್ಸಮಾನ (COBSE ರವರಿಂದ ಮಾನ್ಯತೆ ಪಡೆದ) ಪರೀಕ್ಷೆಗಳಲ್ಲಿ ಉತ್ತೀರ್ಣ/ಅನುತ್ತೀರ್ಣರಾದ ವಿದ್ಯಾರ್ಥಿಗಳು ಪ್ರಥಮ/ದ್ವಿತೀಯ ಪಿಯುಸಿ ಕಾಲೇಜು ದಾಖಲಾತಿಗೆ ಕೋರಿ ಅರ್ಜಿಯೊಂದಿಗೆ ಸಲ್ಲಿಸುವ ದಾಖಲೆಗಳನ್ನು ಪ್ರಾಚಾರ್ಯರು ಎಚ್ಚರಿಕೆವಹಿಸಿ ಪರಿಶೀಲಿಸಿದ ನಂತರವೇ ವಿದ್ಯಾರ್ಥಿಗಳಿಗೆ ಕಾಲೇಜು ಬದಲಾವಣೆ ಸೌಲಭ್ಯವನ್ನು ಒದಗಿಸಲು ಸೂಚಿಸಿದೆ.
3. ಅಂತಿಮ ದಿನಾಂಕದ ನಂತರ ಕಾಲೇಜು ಬದಲಾವಣೆ ಕೋರಿ ಬರುವ ಕೋರಿಕೆಯನ್ನು ಕಾಲೇಜಿನ ಹಂತದಲ್ಲಿಯೇ ತಿರಸ್ಕರಿಸತಕ್ಕದು. ***ಅವಧಿ ಮುಗಿದ ನಂತರ ಕಾಲೇಜು ಬದಲಾವಣೆ ಬಯಸುವ ವಿದ್ಯಾರ್ಥಿಗಳನ್ನು ಯಾವುದೇ ಕಾರಣಕ್ಕೂ ನಿರ್ದೇಶನಾಲಯಕ್ಕೆ ಬರುವಂತೆ ಪ್ರೇರೇಪಿಸಬಾರದು.***
4. **IGCSE/NWAS ಪಠ್ಯಕ್ರಮದಲ್ಲಿ ಪ್ರಥಮ ಪಿಯುಸಿಯನ್ನು ವ್ಯಾಸಂಗ ಮಾಡಿ ಉತ್ತೀರ್ಣರಾದ ವಿದ್ಯಾರ್ಥಿಗಳು ರಾಜ್ಯದ ದ್ವಿತೀಯ ಪಿಯುಸಿಯಲ್ಲಿ ದಾಖಲಾತಿ ಪಡೆಯಲು ಅರ್ಹರಾಗಿರುವುದಿಲ್ಲ.**

## ಇ. ಕಾಲೇಜು ಬದಲಾವಣೆಗೆ ವಿದ್ಯಾರ್ಥಿಗಳು ಪಾಲಿಸಬೇಕಾದ ಸೂಚನೆಗಳು:

1. ಕಾಲೇಜು ಬದಲಾವಣೆ ಅರ್ಜಿಯನ್ನು 2016-17ನೇ ಶೈಕ್ಷಣಿಕ ಸಾಲಿಗೆ ಪರಿಷ್ಕರಿಸಲಾಗಿದ್ದು. ಅದನ್ನು ಇಲಾಖೆಯ Websiteನಲ್ಲಿ ಪ್ರಕಟಿಸಲಾಗಿದೆ. ಕಾಲೇಜು ಬದಲಾವಣೆ ಬಯಸುವ ವಿದ್ಯಾರ್ಥಿಗಳು ಸದರಿ ಅರ್ಜಿ ನಮೂನೆಯನ್ನು ಇಲಾಖೆಯ Website ನಿಂದ Download ಮಾಡಿಕೊಳ್ಳತಕ್ಕದ್ದು/ ಮುದ್ರಿಸಿಕೊಳ್ಳತಕ್ಕದ್ದು.
2. **CBSE/ICSE/ STATE/OTHER STATE/ ಬೋರ್ಡ್‌ಗಳ** ಪರೀಕ್ಷಾ ಮಂಡಳಿಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು, ರಾಜ್ಯದ ದ್ವಿತೀಯ ಪಿಯುಸಿಗೆ ದಾಖಲಾಗಲು ಪದವಿ ಪೂರ್ವ ಶಿಕ್ಷಣದ ನಿರ್ದೇಶನಾಲಯದಿಂದ ಕಡ್ಡಾಯವಾಗಿ Eligibility Certificate ಪಡೆದ ನಂತರವೇ ದಾಖಲಾತಿಗೆ ಅರ್ಹರಾಗಿರುತ್ತಾರೆ. (ಅರ್ಜಿಯನ್ನು **ಸಹಾಯಕ ನಿರ್ದೇಶಕರು, (ಶೈಕ್ಷಣಿಕ)ಪದವಿ ಪೂರ್ವ ಶಿಕ್ಷಣ ಇಲಾಖೆ, ರವರಿಗೆ ಸಲ್ಲಿಸಿ ಅನುಮತಿ ಪಡೆಯುವುದು**).
3. ಕಾಲೇಜು ಬದಲಾವಣೆ ಬಯಸುವ ವಿದ್ಯಾರ್ಥಿಯು ಸರ್ಕಾರ ನಿಗದಿಪಡಿಸಿರುವ ಶುಲ್ಕವನ್ನು ಲೆಕ್ಕ ಶೀರ್ಷಿಕೆ:(0202-01-102-01-06) ಸಂಬಂಧಿಸಿದ ಖಜಾನೆಯ Agency Bank ಮೂಲಕ ಹಣ ಪಾವತಿಸಿ ಅದರ ಮೂಲ ಚಲನ್‌ನ್ನು ಕಾಲೇಜು ಬದಲಾವಣೆ ಅರ್ಜಿಯೊಂದಿಗೆ ಸಲ್ಲಿಸತಕ್ಕದು.

**ಅತೀ ಮುಖ್ಯ ಸೂಚನೆಗಳು:**

1. ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ದಾಖಲಾತಿ ಪಡೆದು ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗಲು ಅನರ್ಹರಾದ ವಿದ್ಯಾರ್ಥಿಗಳು ಅದೇ ಸಂಯೋಜನೆಯೊಂದಿಗೆ **ಮತ್ತೆ ತರಗತಿಗೆ ಮರುದಾಖಲಾತಿ ಪಡೆಯಲು ಅವಕಾಶವಿರುತ್ತದೆ.**
2. ಹಾಜರಾತಿ ಕೊರತೆ ಇದ್ದು ಒಂದು ವೇಳೆ ಅದೇ ಕಾಲೇಜಿನಲ್ಲಿ ವಿದ್ಯಾರ್ಥಿಯು ಕಾಲೇಜಿಗೆ ಮರು ದಾಖಲಾತಿ ಬಯಸಿದ್ದಲ್ಲಿ ಇಲಾಖಾ ಅನುಮತಿ ಪಡೆಯುವುದು ಅಗತ್ಯವಿರುವುದಿಲ್ಲ. ಸದರಿ ವಿದ್ಯಾರ್ಥಿಗಳಿಗೆ ದಾಖಲಾತಿ ಪಡೆಯಲು ಕಾಲೇಜಿನ ಪ್ರಾಚಾರ್ಯರು ಅವಕಾಶ ಮಾಡಿಕೊಡತಕ್ಕದ್ದು.
3. **ರಾಜ್ಯದ ಪದವಿ ಪೂರ್ವ ಕಾಲೇಜಿನಲ್ಲಿ ದಾಖಲಾತಿ ಪಡೆದು ಹಾಜರಾತಿ ಕೊರತೆಯಿಂದ ಪರೀಕ್ಷೆಗೆ ಹಾಜರಾಗದ ವಿದ್ಯಾರ್ಥಿಗಳು ಬೇರೆ ಕಾಲೇಜಿನಲ್ಲಿ ವ್ಯಾಸಂಗವನ್ನು ಮುಂದುವರೆಸಲು ಬಯಸಿದ್ದಲ್ಲಿ ಕಾಲೇಜು ಬದಲಾವಣೆ ಮಾಡಿಕೊಳ್ಳಬಹುದು.**
4. ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳನ್ನು ಮರುದಾಖಲಾತಿ ಮಾಡಿಕೊಂಡಿರುವ ಕಾಲೇಜಿನ ಪ್ರಾಚಾರ್ಯರುಗಳು ಸದರಿ ವಿದ್ಯಾರ್ಥಿಗಳ ಮಾಹಿತಿಯನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ದ್ವಿಪ್ರತಿಯಲ್ಲಿ ಸಲ್ಲಿಸುವುದು ಪ್ರಾಚಾರ್ಯರು ಸಲ್ಲಿಸಿರುವ ಮಾಹಿತಿಯನ್ನು ಜಿಲ್ಲಾ ಉಪ ನಿರ್ದೇಶಕರು **ವಿಳಂಬಕ್ಕೆ ಅವಕಾಶವಿಲ್ಲದಂತೆ ಕೂಡಲೇ ಮಾಹಿತಿಯನ್ನು ಸಹಾಯಕ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರಿಗೆ ದೃಢೀಕರಿಸಿ ಸಲ್ಲಿಸತಕ್ಕದು, ತಪ್ಪಿದಲ್ಲಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರೇ ಜಾವಾಬ್ದಾರರಾಗುತ್ತಾರೆ.**
5. ಕಾಲೇಜಿನ ಪ್ರಾಚಾರ್ಯರು ವಿದ್ಯಾರ್ಥಿಗಳ ಮಾಹಿತಿಯನ್ನು ನೀಡದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ದ್ವಿತೀಯ ಪಿಯುಸಿ ನೋಂದಣಿ ಸಂಖ್ಯೆಯನ್ನು ನೀಡಲು ಅವಕಾಶವಿರುವುದಿಲ್ಲ. ಸಂಬಂಧಿಸಿದ ಮಾಹಿತಿ ನೀಡದೇ ಇದ್ದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರು/ಆಡಳಿತ ಮಂಡಳಿಯವರು ನೇರ ಹೊಣೆಗಾರರಾಗುತ್ತಾರೆ.

## 1.4 ಮರು ದಾಖಲಾತಿ ಕುರಿತು ಮಾರ್ಗಸೂಚಿ:

**ಭಾಷೆ/ವಿಷಯ/ಬದಲಾವಣೆ :**

- ಈಗಾಗಲೇ ಪದವಿ ಪೂರ್ವ ಶಿಕ್ಷಣ ಅಥವಾ ತತ್ಸಮಾನ ಕೋರ್ಸ್‌ಗಳಲ್ಲಿ ಉತ್ತೀರ್ಣನಾಗಿರುವ ವಿದ್ಯಾರ್ಥಿಗಳು, ಅದೇ ವಿಷಯಗಳು ಮತ್ತು ಸಂಯೋಜನೆಗಳಲ್ಲಿ ಹಿಂದೆ ತಾವು ಅಧ್ಯಯನ ಮಾಡಿದ ಕಾಲೇಜಿನಲ್ಲಿ ಅಥವಾ ಬೇರೆ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಥಮ /ದ್ವಿತೀಯ ಪದವಿ ಪೂರ್ವ ತರಗತಿಗಳಿಗೆ ಮರುದಾಖಲಾತಿಗೆ ಅವಕಾಶವಿರುವುದಿಲ್ಲ.
- ಪದವಿ ಪೂರ್ವ ಶಿಕ್ಷಣದ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರುವ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಯು ತಾನು ಈ ಹಿಂದೆ ಅಧ್ಯಯನ ಮಾಡಿದ ವಿಷಯಗಳನ್ನು ಹೊರತುಪಡಿಸಿ ಇತರೆ ವಿಷಯಗಳ ಸಂಯೋಜನೆಗೆ ನಿಗದಿತ ಶುಲ್ಕವನ್ನು ಪಾವತಿಸಿ ಪಡೆದು ಪ್ರಥಮ ಪಿಯುಸಿಗೆ ಮರುದಾಖಲಾತಿ ಹೊಂದಬಹುದಾಗಿದೆ.
- ಎರಡು ವರ್ಷಗಳ ಪದವಿ ಪೂರ್ವ ಶಿಕ್ಷಣವನ್ನು ಪೂರ್ಣಗೊಳಿಸಿರುವ, ಆದರೆ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಯು ಪುನಃ ದ್ವಿತೀಯ ಪಿಯುಸಿಗೆ ತಾನು ಅಧ್ಯಯನ ಮಾಡಿಧ ವಿಷಯಗಳು ಅಥವಾ ಬೇರೆ ವಿಷಯಗಳಿಗೆ ಮರುದಾಖಲಾತಿಗೆ ಅವಕಾಶವಿರುವುದಿಲ್ಲ.
- ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರಥಮ ಪಿಯುಸಿಯಲ್ಲಿ 6 ವಿಷಯಗಳನ್ನು ಅದ್ಯಯನ ಮಾಡಿ, ಅದೇ 6 ವಿಷಯಗಳಲ್ಲಿ ದ್ವಿತೀಯ ಪಿಯುಸಿಯನ್ನು ಅದ್ಯಯನ ಮಾಡಬೇಕು. ಅಂದರೆ ಭಾಗ–1ರಲ್ಲಿ 2 ಭಾಷಾ ವಿಷಯಗಳು ಮತ್ತು ಭಾಗ–2ರಲ್ಲಿ 4 ಐಚ್ಛಿಕ ವಿಷಯಗಳನ್ನು ಅದ್ಯಯನ ಮಾಡಬೇಕು.

- ಪ್ರಥಮ ಪಿಯುಸಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಯು ದ್ವಿತೀಯ ಪಿಯುಸಿಯಲ್ಲಿ ಗರಿಷ್ಠ 2 ವಿಷಯಗಳನ್ನು (ಒಂದು ಭಾಷೆ, ಒಂದು ಐಚ್ಛಿಕ ವಿಷಯ) ಅನಿವಾರ್ಯ/ಸಮಂಜಸ ಕಾರಣಗಳಿಗಾಗಿ ಬದಲಾವಣೆ ಬಯಿಸಿದ್ದಲ್ಲಿ, ಅಂತಹ ವಿದ್ಯಾರ್ಥಿಯು ಕಡ್ಡಾಯವಾಗಿ ನಿರ್ದೇಶನಾಲಯದ ಅನುಮತಿ ಪಡೆದು ಬದಲಾವಣೆ ಮಾಡಿಕೊಳ್ಳಬಹುದು, ವಿದ್ಯಾರ್ಥಿಯು ಬದಲಾವಣೆ ಪಡೆದ ವಿಷಯಗಳಲ್ಲಿ ಪ್ರಥಮ ಪಿಯುಸಿಯ ಜಿಲ್ಲಾ ಮಟ್ಟದ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳೊಂದಿಗೆ ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ. ಆದರೆ ಪ್ರಾಯೋಗಿಕ ಪರೀಕ್ಷೆ ಹೊಂದಿರುವ ಯಾವುದೇ ವಿಷಯಗಳಲ್ಲಿ ಇಂತಹ ಬದಲಾವಣೆಗೆ ಅವಕಾಶವಿರುವುದಿಲ್ಲ.
- 2 ವರ್ಷಗಳ (ಪದವಿ ಪೂರ್ವ) ಅಧ್ಯಯನ ಅವಧಿ ಪೂರ್ಣಗೊಳಿಸಿ ಆದರೆ, ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಲು ಸಾಧ್ಯವಾಗದೆ ಅಥವಾ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿ ಕೋರ್ಸ್ ಪೂರ್ಣಗೊಳಿಸಿದ ವಿದ್ಯಾರ್ಥಿಯು ಸಂಪೂರ್ಣವಾಗಿ ಬೇರೆ ವಿಷಯಗಳ ಸಂಯೋಜನೆಯನ್ನು ಅಧ್ಯಯನ ಮಾಡಲು ಬಯಸಿದ್ದಲ್ಲಿ ಕಡ್ಡಾಯವಾಗಿ ನಿರ್ದೇಶನಾಲಯದ ಅನುಮತಿ ಪಡೆದು ಅಧ್ಯಯನ ಮಾಡ ಬಹುದಾಗಿದೆ.

**1.5. ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಂದ ಪಡೆಯಬೇಕಾದ ಶುಲ್ಕದ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ.**

- **ಉಲ್ಲೇಖ-01ರ ಸರ್ಕಾರದ ಆದೇಶದಂತೆ ವಿದ್ಯಾರ್ಥಿಗಳಿಂದ ಶುಲ್ಕವನ್ನು ಪಡೆಯಲು ತಿಳಿಸಿದೆ.**
- **ಉಲ್ಲೇಖ-02ರಲ್ಲಿ ಸರ್ಕಾರಿ ಆದೇಶ ಸಂಖ್ಯೆ** ಇಡಿ 198 ಯೋಸಕ 2013, ದಿನಾಂಕ: 15.04.2015ರಂತೆ ಈ ಶೈಕ್ಷಣಿಕ ವರ್ಷದಿಂದ ರಾಜ್ಯದ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಮಾತ್ರ ರೋವರ್ ಮತ್ತು ರೇಂಜರ್ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸದರಿ ಘಟಕಗಳ ಚಟುವಟಿಕೆಗಾಗಿ ಪ್ರತಿ ವಿದ್ಯಾರ್ಥಿಯಿಂದ ರೂ 50ರ ಶುಲ್ಕವನ್ನು ಪಡೆಯಲು ಸರ್ಕಾರವು ಆದೇಶಿಸಿದೆ.

**1.6. ಕಾಲೇಜಿನ ಪ್ರಾಚಾರ್ಯರುಗಳು ವಿದ್ಯಾರ್ಥಿಗಳ ಪ್ರಥಮ/ದ್ವಿತೀಯ ಪಿಯುಸಿ ಮಾಹಿತಿಯನ್ನು Proforma-A, Proforma-1 &Proforma-2** ರಲ್ಲಿ ನಮೂದಿಸಿ ದಿನಾಂಕ: **15-07-2016** ರೊಳಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮೂಲಕ ಸಹಾಯಕ ನಿರ್ದೇಶಕರು (ಶೈಕ್ಷಣಿಕ ಶಾಖೆ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಸಲ್ಲಿಸತಕ್ಕದ್ದು. **e-mail.** ಹಾಗೂ ಪತ್ರ ಮೂಲಕವು ಸಲ್ಲಿಸತಕ್ಕದ್ದು.

**1.7. ರಾಜ್ಯದಲ್ಲಿರುವ ಎಲ್ಲ ಸರ್ಕಾರಿ, ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳು ಶೈಕ್ಷಣಿಕ ಹಾಗೂ ದಾಖಲಾತಿಯ ವೇಳಾಪಟ್ಟಿಯನ್ನು ಕಡ್ಡಾಯವಾಗಿ ಪಾಲಿಸಲು ಸೂಚಿಸಿದೆ. ಇದಕ್ಕೆ ತಪ್ಪಿದಲ್ಲಿ ಮುಂದೆ ಉದ್ಭವಿಸುವ ಎಲ್ಲಾ ಆಗು ಹೋಗುಗಳಿಗೆ ಸಂಬಂಧಿಸಿದ ಪ್ರಾಚಾರ್ಯರನ್ನೇ ನೇರ ಹೊಣೆಗಾರರನ್ನಾಗಿಸುವದಲ್ಲದೇ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.**

1.8 ವಿದ್ಯಾರ್ಥಿಗಳು ಪಾವತಿಸ ಬೇಕಾದ ಮೊತ್ತದ ವಿವರ

Eligibility Certificate- Rs. 600/- (Within Country)
Eligibility Certificate- Rs. 3600/- (other Country),
Change of College- Rs. 1200/- ,
Change of Combination- Rs. 600/-,
Change of Subject- Rs. 600/-,
Private Study- Rs.504/-(Indian Language, Non-Practical Optional Subject/ Excluding Science Combination).

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.